## ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ. ದ. ನ್ಯಾ.ದಂ.ನ್ಯಾಯಾಲಯ,

## ಶಹಾಪೂರ

ಸಿ.ಡಬ್ಲ್ಯೂ. 1 ಪಿ.ಡಬ್ಲ್ಯೂ.1

ಸಿ.ಸಿ. ನಂ. 281/2016

| | | |
|---|---|---|
| ಹೆಸರು | ಃ | ಶಿವನಗೌಡ |
| ತಂದೆ ಹೆಸರು | ಃ | ಬಸನಗೌಡ |
| ವಯಸ್ಸು | ಃ | 38 ವರ್ಷ |
| ಉದ್ಯೋಗ | ಃ | ಒಕ್ಕಲುತನ |
| ವಾಸ | ಃ | ಕರಡಕಲ್ ತಾಃ ಸುರಪೂರ. |

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು ದಿನಾಂಕಃ 24-06-2023.
ಮುಖ್ಯ ವಿಚಾರಣೆ ಃ ಸಹಾಯಕ ಸರಕಾರಿ ಅಭಿಯೋಜಕರವರಿಂದ ಃ

ಚಾಸಾ-4 ಮತ್ತು 5 ರವರು ನಮ್ಮ ಸಂಬಂಧಿಕರು. ಚಾಸಾ-6 ರಿಂದ 10 ರವರ ಪರಿಚಯ ಇರುತ್ತದೆ.

2. ದಿನಾಂಕಃ 19-10-2015 ರಂದು ಬೆಳಗ್ಗೆ 09-30 ಗಂಟೆಯ ಸುಮಾರಿಗೆ ನಾನು ಮತ್ತು ಚಾಸಾ-4 ನನ್ನ ತಮ್ಮ ಕೂಡಿ ಪಡದಳ್ಳಿ ಸೀಮಾಂತರದಲ್ಲಿರುವ ನಮ್ಮ ಹೊಲಕ್ಕೆ ಲೇಬರ್ ಗಳನ್ನು ಕರೆದುಕೊಂಡು ನಮ್ಮ ಸ್ನೇಹಿತ ದೇವಿಂದ್ರಪ್ಪ ಇವರ ಕ್ರೂಸರ್ ಜೀಪ್ ನಲ್ಲಿ ಕರೆದುಕೊಂಡು ಬಂದಿರುತ್ತೇನೆ. ಆ ದಿನ ಜೀಪನ್ನು ನಾನೇ ಚಲಾಯಿಸಿಕೊಂಡು ಬಂದಿರುತ್ತೇನೆ. ಲೇಬರ್ ಗಳನ್ನು ಹೊಲದಲ್ಲಿ ಬಿಟ್ಟು ಮದ್ಯಾಹ್ನ 1-30 ಗಂಟೆಗೆ ಶಹಾಪೂರಕ್ಕೆ ಬಂದು ಅಲ್ಲಿ ಕರ್ನಾಟಕ ಬ್ಯಾಂಕ್ ನಲ್ಲಿ 3 ಗಂಟೆಗೆ 1 ಲಕ್ಷ ರೂಪಾಯಿ ಹಣ ಡ್ರಾ ಮಾಡಿಕೊಂಡಿರುತ್ತೇನೆ. ನಂತರ ಆ ಹಣವನ್ನು ಕೈವಸ್ತ್ರದಲ್ಲಿ ಕಟ್ಟಿ ಜೀಪು ಚಾಲಕನ ಪಕ್ಕದಲ್ಲಿ ಇರುವ ಡ್ರಾದಲ್ಲಿ ಇಟ್ಟಿಕೊಂಡು ಪಡದಳ್ಳಿ ಕಡೆಗೆ ಹೋಗುತ್ತಿದ್ದೇವು. ಚಾಸಾ-4 ರವರು ಎಕ್ಸಿಸ್ ಬ್ಯಾಂಕ್ ಎ ಟಿ ಎಮ್ ನಲ್ಲಿ ಹಣ ಡ್ರಾ ಮಾಡುತ್ತೇನೆ ಅಂತ ಹೋದನು. ನಾನು ಜಿಪುನಲ್ಲಿ ಇದ್ದೆ. ಚಾಸಾ-4 ರವರು ಹಣ ಡ್ರಾ ಮಾಡಿಕೊಂಡು ಬಂದು ಜೀಪಿನ ಬಾಗಿಲು ತೆಗೆಯುತ್ತಿದ್ದಾಗ ಒಬ್ಬ ವ್ಯಕ್ತಿ ಒಂದು ಮೋಟರ ಸೈಕಲ್ ಮೇಲೆ ಭೀಮರಾಯಗುಡಿಯ ಕಡೆಯಿಂದ ಬಂದು ಜೀಪಿನಿಂದ ಆಯಿಲ್ ಸೋರುತ್ತಿದ್ದೆ ಎಂದು ಹೇಳಿದ. ಆಗ ನಾನು ಚಾಸಾ-4 ರವರಿಗೆ ಎಲ್ಲಿ ಆಯಿಲ್ ಸೋರುತ್ತಿದ್ದೆ ಎಂದು ಚೆಕ್ ಮಾಡುವಂತೆ ಹೇಳಿದ್ದೆ. ಆಗ ಚಾಸಾ-4 ರವರು ಆಯಿಲ್ ಸೋರುತ್ತಿದ್ದೆ ಎಂದು ನನಗೆ ಹೇಳಿದ. ಆಗ ನಾನು ಸಹಿತ ಜೀಪಿನಿಂದ ಕೆಳಗೆ ಇಳಿದು ಜೀಪು ಕೆಳಗೆ ಇಣುಕಿ ನೋಡುತ್ತಿದ್ದಾಗ ಯಾರೋ ವ್ಯಕ್ತಿಗಳು ನಾವು ಜೀಪುನಲ್ಲಿ ಇಟ್ಟಿದ 1 ಲಕ್ಷ ರೂಪಾಯಿ ತೆಗೆದುಕೊಂಡು ಹೋಗಿರುವುದು ಗೊತ್ತಾಯಿತು. ನಂತರ ನಾನು ಮತ್ತು ಚಾಸಾ-4 ರಿಂದ 6 ರವರು ಹಣಕ್ಕಾಗಿ ಅಲ್ಲಲ್ಲಿ ಹುಡುಕಾಡಿರುತ್ತೇವೆ. ಆ ದಿನ ನಮಗೆ ನಮ್ಮ ಕಳೆದು ಹೋದ ಹಣ ಸಿಗಲಿಲ್ಲ. ನಂತರ ದಿನಾಂಕಃ 20-10-2015

ರಂದು ನಾನು ಮತ್ತು ಚಾಸಾ-4 ರಿಂದ 6 ರವರು ಪೊಲೀಸ್ ಠಾಣೆಗೆ ಹೋದ್ದೇವು. ಆ ಬಗ್ಗೆ ಒಂದು ದೂರನ್ನು ನೀಡಿರುತ್ತೇವೆ. ಸದರಿ ದೂರನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ 1 ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 1(ಎ) ಎಂದು ಗುರುತಿಸಲಾಯಿತು.

3. ದಿನಾಂಕಃ 21-11-2015 ರಂದು ಪೊಲೀಸರು ನನಗೆ ಕರೆ ಮಾಡಿ ಯಾದಗಿರಿ ಎಸ್ ಪಿ ಕಚೇರಿಗೆ ಬರಲು ಹೇಳಿದ್ದರು.ಅಲ್ಲಿ ನಾವು ಹೋದ ನಂತರ ಪೊಲೀಸರು ನಮ್ಮ ಜೀಪಿನಿಂದ ಕಳ್ಳತನ ಮಾಡಿದ ಹಣ್ಣ ಸಿಕ್ಕಿರುವುದಾಗಿ ಹೇಳಿದ್ದರು. ಅಲ್ಲಿ 6 ಜನ ಅರೋಪಿಗಳನ್ನು ನಮಗೆ ತೋರಿಸಿದ್ದರು. ಅವರ ಪೈಕಿ 3 ಜನ ಹೆಣ್ಣು ಮಕ್ಕಳು ಮತ್ತು 3 ಜನ ಗಂಡು ಮಕ್ಕಳು ಇದ್ದರು. ಅವರನ್ನು ತೋರಿಸಿ ಇವರುಗಳೇ ಕಳ್ಳತನ ಮಾಡಿರುವುದಾಗಿ ಹೇಳಿದ್ದರು. ಸದರಿ ನಮ್ಮ ಹಣದಿಂದ 94 ಸಾವಿರ ರೂಪಾಯಿ ನಗದು ಹಣ ಜಪ್ತಿಪಡಿಸಿಕೊಂಡಿರುವುದಾಗಿ ಹೇಳಿದ್ದರು. 6 ಸಾವಿರ ರೂಪಾಯಿ ಅರೋಪಿತರು ಖರ್ಚು ಮಾಡಿರುವುದಾಗಿ ನಮಗೆ ಪೊಲೀಸರು ತಿಳಿಸಿದ್ದರು. ಆರೋಪಿತರನ್ನು ನೋಡಿದರೆ ಗುರುತಿಸಬಲ್ಲೆ. ಅವರ ಹೆಸರು ವಿನೋದ, ನಾಗರಾಜ ಮತ್ತು ಕೆ ವೆಂಕಟೇಶ ಎಂದು ಇರುತ್ತದೆ. ಮಹಿಳಾ ಆರೋಪಿತರ ಹೆಸರು ನನಗೆ ನೆನಪಿಲ್ಲ. ನನಗೆ ಪೊಲೀಸರು ಆರೋಪಿತರನ್ನು ಶಹಾಪೂರ ಪೊಲೀಸ್ ಠಾಣೆಯಲ್ಲಿ ಒಮ್ಮೆ ತೋರಿಸಿದ್ದರು ಮತ್ತು ಒಮ್ಮೆ ಎಸ್ ಪಿ ಕಚೇರಿ ಯಾದಗಿರಿಯಲ್ಲಿ ತೋರಿಸಿದ್ದರು. ಅಲ್ಲಿ ನಾವು ಆರೋಪಿತರೊಂದಿಗೆ ಮಾತುಕತೆ ಮಾಡಿರುವುದಿಲ್ಲ. ಆ ದಿನ ನಮ್ಮ ಜೀಪಿನ ಆಯಿಲ್ ಸೋರುತ್ತಿದ್ದೆ ಎಂದು ಹೇಳಿದ ವ್ಯಕ್ತಿ ಕೆ ವೆಂಕಟೇಶ್ ಎಂದು ಗೊತ್ತಾಯಿತು. ಕೆ ವೆಂಕಟೇಶ ಇತನ್ನು ನಮ್ಮ ಜೀಪಿನ ಕೆಳಗೆ ಆಯಿಲ್ ಚೆಲ್ಲಿ ನಮ್ಮಿಬ್ಬರ ಗಮನ ಬೇರೆ ಕಡೆಗೆ ಸೆಳೆದಾಗ ಆರೋಪಿ ವಿನೋದ ಇತನ್ನು ನಮ್ಮಜೀಪಿನಲ್ಲಿ ಇದ್ದ ಹಣವನ್ನು ಎತ್ತಿ ಕಳ್ಳತವ ಮಾಡಿರುತ್ತಾನೆ ಉಳಿದ ಆರೋಪಿತರು ಎಲ್ಲಿ ಇದ್ದರು ಎಂದು ನನಗೆ ಗೊತ್ತಿಲ್ಲ.

4. ಆರೋಪಿತರಿಂದ ಜಪ್ತಿಪಡಿಸಿಕೊಂಡಿದ್ದ ಹಣ 94 ಸಾವಿರ ರೂಪಾಯಿ ಹಣವನ್ನು ಪೊಲೀಸರು ನನಗೆ ಮರಳಿ ನೀಡಿರುತ್ತಾರೆ. ಪೊಲೀಸರು ಕರೆದಾಗ ನಾನು ಮತ್ತು ಚಾಸಾ-3 ತಿರುಪತಿ, ಚಾಸಾ-4, ಚಾಸಾ-2 ಹೋಗಿದ್ದೇವು.

5. ನಾನು ದೂರು ದಾಖಲಿಸಿದ ನಂತರ ಪೊಲೀಸರು ಅದೇ ದಿನ ಗುನ್ಹಾ ಸ್ಥಳಕ್ಕೆ ಬಂದು ಅಲ್ಲಿ ಬ್ಯಾಂಕಿನಲ್ಲಿ ಇದ್ದ ಸಿ ಸಿ ಟಿ ವಿ ಪುಟೇಜ್ ಚೆಕ್ ಮಾಡಿದರು. ಗುನ್ಹಾ ಸ್ಥಳವನ್ನು ಪೊಲೀಸರಿಗೆ ನಾನೇ ತೋರಿಸಿರುತ್ತೇನೆ. ಪೊಲೀಸರು ನನ್ನ ಸಮಕ್ಷಮ ಗುನ್ಹಾ ಸ್ಥಳದ ಪಂಚನಾಮೆ ಮಾಡಿರುತ್ತಾರೆ. ಪಂಚನಾಮೆಯನ್ನು ಸಾಯಂಕಾಲ 05 ಗಂಟೆಯಿಂದ 06 ಗಂಟೆಯ ವರೆಗೆ ಮಾಡಿರುತ್ತಾರೆ. ಅಲ್ಲಿ ಪಂಚನಾಮೆಯ ಕಾಲಕ್ಕೆ ಪೂಲೀಸರು ಜೀಪು ಮತ್ತು ನಮ್ಮಪೋಟೋ ತೆಗೆದಿರುತ್ತಾರೆ. ಸದರಿ ಭಾವಚಿತ್ರಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳ ಪೈಕಿ ಒಂದು ಭಾವಚಿತ್ರ ಈಗಾಲೇ ನಿಪಿ 2 ಎಂದು ಗುರುತಿಸಲಾಗಿದ್ದು.

ಇನ್ನೊಂದು ಭಾವಚಿತ್ರವನ್ನು ನಿಪಿ 6 ಎಂದು ಗುರುತಿಸಲಾಯಿತು.

**<u>ಮರುವಿಚಾರಣೆ ಇಲ್ಲ.</u>**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಶಹಾಪೂರ.

## ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ. ದ. ನ್ಯಾ.ದಂ.ನ್ಯಾಯಾಲಯ,

## ಶಹಾಪೂರ.

ಸಿ.ಡಬ್ಲ್ಯೂ. 4 ಪಿ.ಡಬ್ಲ್ಯೂ.2

ಸಿ.ಸಿ. ನಂ. 281/2016

| | | |
|---|---|---|
| ಹೆಸರು | ಃ | ಪ್ರಭು |
| ತಂದೆ ಹೆಸರು | ಃ | ಸಂಗಣಗೌಡ ಬಿರಾದಾರ |
| ವಯಸ್ಸು | ಃ | 24 ವರ್ಷ |
| ಉದ್ಯೋಗ | ಃ | ವಿದ್ಯಾರ್ಥಿ |
| ವಾಸ | ಃ | ಕರಡಕಲ್ ಗ್ರಾಮ ತಾಃ ಸುರಪೂರ. |

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು ದಿನಾಂಕಃ 24-06-2023.
ಮುಖ್ಯ ವಿಚಾರಣೆ ಃ ದಂಡ ಪ್ರಕ್ರಿಯೇ ಸಂಹಿತೆ ಕಲಂ 299 ರ ಅಡಿಯಲ್ಲಿ ಸಹಾಯಕ ಸರಕಾರಿ ಅಭಿಯೋಜಕರವರಿಂದ ಃ

ಚಾಸಾ-1 ನನ್ನ ದೊಡ್ಡಪ್ಪನ ಮಗ. ಚಾಸಾ-5 ನನ್ನ ಸಂಬಂಧಿಕ. ಚಾಸಾ-6 ನನಗೆ ಪರಿಯದಾವರು ಆಗಿರುತ್ತಾರೆ. ಚಾಸಾ-7 ರಿಂದ 10 ರವರ ಪರಿಚಯ ಇರುವುದಿಲ್ಲ.

ದಿನಾಂಕಃ 19-10-2015 ರಂದು ಬೆಳಗ್ಗೆ 09-00 ಗಂಟೆಯ ಸುಮಾರಿಗೆ ನಾನು ಮತ್ತು ಚಾಸಾ-1 ನನ್ನ ಅಣ್ಣ ಕೂಡಿ ಪಡದಳ್ಳಿ ಸೀಮಾಂತರದಲ್ಲಿರುವ ಚಾಸಾ-1 ರವರ ಹೊಲಕ್ಕೆ ಲೇಬರ್ ಗಳನ್ನು ಕರೆದುಕೊಂಡು ಚಾಸಾ-1 ರವರ ಸ್ನೇಹಿತ ದೇವಿಂದ್ರಪ್ಪ ಇವರ ಕ್ರೂಸರ್ ಜೀಪ್ ನಲ್ಲಿ ಕರೆದುಕೊಂಡು ಬಂದಿರುತ್ತೇವೆ. ಆ ದಿನ ಜೀಪನ್ನು ಚಾಸಾ-1 ರವರು ಚಲಾಯಿಸಿರುತ್ತಾರೆ. ಲೇಬರ್ ಗಳನ್ನು ಹೊಲದಲ್ಲಿ ಬಿಟ್ಟು ಮದ್ಯಾಹ್ನ 1-30 ಗಂಟೆಗೆ ಶಹಾಪೂರಕ್ಕೆ ಬಂದು ಅಲ್ಲಿ ಚಾಸಾ-1 ರವರು ಕರ್ನಾಟಕ ಬ್ಯಾಂಕ್ ನಲ್ಲಿ 3 ಗಂಟೆಗೆ 1 ಲಕ್ಷ ರೂಪಾಯಿ ಹಣ ಡ್ರಾ ಮಾಡಿಕೊಂಡಿರುತ್ತಾರೆ. ನಂತರ ಆ ಹಣವನ್ನು ಕರವಸ್ತ್ರದಲ್ಲಿ ಕಟ್ಟಿ ಜೀಪು ಚಾಲಕನ ಪಕ್ಕದಲ್ಲಿ ಇಟ್ಟಿಕೊಂಡರು. ನಂತರ ಪಡದಳ್ಳಿ ಕಡೆಗೆ ಹೋಗುತ್ತಿದ್ದೇವು. ನಾನು ಎಕ್ಸಿಸ್ ಬ್ಯಾಂಕ್ ಎ ಟಿ ಎಮ್ ನಲ್ಲಿ ಹಣ ಡ್ರಾ ಮಾಡುತ್ತೇನೆ ಅಂತ ಹೇಳಿ ಹೋದನು. ಚಾಸಾ-1 ರವರು ಜಿಪುನಲ್ಲಿ ಇದ್ದರು. ನಾನು ಹಣ ಡ್ರಾ ಮಾಡಿಕೊಂಡು ಬಂದು ಜೀಪಿನ ಬಾಗಿಲು ತೆಗೆಯುತ್ತಿದ್ದಾಗ ಒಬ್ಬ ವ್ಯಕ್ತಿ ಒಂದು ಮೋಟರ ಸೈಕಲ್ ಮೇಲೆ ಭೀಮರಾಯಗುಡಿಯ ಕಡೆಯಿಂದ ಬಂದು ಜೀಪಿನಿಂದ ಆಯಿಲ್ ಸೋರುತ್ತಿದ್ದೆ ಎಂದು ಹೇಳಿದ. ಆಗ ನಾನು ಹೋಗಿ ಜೀಪಿನಿಂದ ಎಲ್ಲಿ ಆಯಿಲ್ ಸೋರುತ್ತಿದ್ದೆ ಎಂದು ಚೆಕ್ ಮಾಡಿದೆ. ನಂತರ ಆಯಿಲ್ ಸೋರುತ್ತಿದ್ದೆ ಬಗ್ಗೆ ಚಾಸಾ-1 ರವರಿಗೆ ಹೇಳಿದ್ದೆ. ಆಗ ಚಾಸಾ-1 ರವರು ಸಹಿತ ಜೀಪಿನಿಂದ ಕೆಳಗೆ ಇಳಿದು ಜೀಪು ಕೆಳಗೆ

ಇಣುಕಿ ನೋಡಿರುತ್ತಾರೆ. ನಂತರ ಚಾಸಾ-1 ರವರು ಜೀಪಿನ ಹತ್ತಿರ ಬಂದು ಹಣ ಎಲ್ಲಿ ಹೋಯಿತು ಎಂದು ನೋಡಿದರು. ಅಷ್ಟರಲ್ಲಿ ಯಾರೋ ವ್ಯಕ್ತಿಗಳು ನಾವು ಜೀಪುನಲ್ಲಿ ಇಟ್ಟಿದ 1 ಲಕ್ಷ ರೂಪಾಯಿ ತೆಗೆದುಕೊಂಡು ಹೋಗಿರುವುದು ಗೊತ್ತಾಯಿತು. ನಂತರ ನಾನು ಮತ್ತು ಚಾಸಾ-1 ರವರು ಹಣಕ್ಕಾಗಿ ಅಲ್ಲಲ್ಲಿ ಹುಡುಕಾಡಿರುತ್ತೇವೆ. ನಂತರ ಚಾಸಾ-6 ರವರಿಗೆ ಪೋನ್ ಮಾಡಿದಾಗ ಅವರು ಅಲ್ಲಿಗೆ ಬಂದರು. ನಂತರ ಚಾಸಾ-5 ರವರು ಸಹ ಅಲ್ಲಿಗೆ ಬಂದರು. ನಂತರ ನಾವು ಎಲ್ಲಾ ಆ ದಿನ ನಮ್ಮ ಕಳೆದು ಹೋದ ಹಣಕ್ಕಾಗಿ ಹುಡಕಾಡಿದ್ದೇವೆ. ಆದರೆ ಹಣ ಸಿಗಲಿಲ್ಲ.

ನಂತರ ದಿನಾಂಕಃ 20-10-2015 ರಂದು ನಾನು ಮತ್ತು ಚಾಸಾ-1 ರವರು ಹಾಗೂ ಅವರ ಸ್ನೇಹಿತರು ಸೇರಿ ಪೊಲೀಸ್ ಠಾಣೆಗೆ ಹೋದ್ದೇವು. ಆ ಬಗ್ಗೆ ಒಂದು ದೂರನ್ನು ಚಾಸಾ-1 ರವರು ನೀಡಿರುತ್ತಾರೆ.

ದಿನಾಂಕಃ 21-11-2015 ರಂದು ಪೊಲೀಸರು ಚಾಸಾ-1 ರವರಿಗೆ ಕರೆ ಮಾಡಿ ಶಹಾಪೂರ ಪೊಲೀಸ್ ಠಾಣೆಗೆ ಬರಲು ಹೇಳಿದ್ದರು. ಅಲ್ಲಿ ನಾವು ಹೋದ ನಂತರ ಪೊಲೀಸರು ನಮ್ಮ ಜೀಪಿನಿಂದ ಕಳ್ಳತನ ಮಾಡಿದ ಹಣ್ಣ ಸಿಕ್ಕಿರುವುದಾಗಿ ಹೇಳಿದ್ದರು. ಅಲ್ಲಿ ಒಂದು ಕರವಸ್ತ್ರದಲ್ಲಿ ಇದ್ದ ಹಣ ಚೆಕ್ ಮಾಡುವಂತೆ ಹೇಳಿದ್ದರು. ಆ ಕರವಸ್ತ್ರ ನೋಡಿ ನಾವು ಗುರುತಿಸಿ ಹಣ ಏಣಿಸಿದ್ದಾಗ ಅದರಲ್ಲಿ 94 ಸಾವಿರ ರೂಪಾಯಿ ಇದ್ದಿತ್ತು. ಅಲ್ಲಿ 6 ಜನ ಅರೋಪಿಗಳನ್ನು ನಮಗೆ ತೋರಿಸಿದ್ದರು. ಅವರ ಪೈಕಿ 3 ಜನ ಹೆಣ್ಣು ಮಕ್ಕಳು ಮತ್ತು 3 ಜನ ಗಂಡು ಮಕ್ಕಳು ಇದ್ದರು. ಅವರನ್ನು ತೋರಿಸಿ ಇವರುಗಳೇ ಕಳ್ಳತನ ಮಾಡಿರುವುದಾಗಿ ಹೇಳಿದ್ದರು. ಸದರಿ ನಮ್ಮ ಹಣದಿಂದ 94 ಸಾವಿರ ರೂಪಾಯಿ ನಗದು ಹಣ ಜಪ್ತಿಪಡಿಸಿಕೊಂಡಿರುವುದಾಗಿ ಹೇಳಿದ್ದರು. 6 ಸಾವಿರ ರೂಪಾಯಿ ಅರೋಪಿತರು ಖರ್ಚು ಮಾಡಿರುವುದಾಗಿ ನಮಗೆ ಪೊಲೀಸರು ತಿಳಿಸಿದ್ದರು. ಆರೋಪಿತರನ್ನು ನೋಡಿದರೆ ಗುರುತಿಸಬಲ್ಲೆ. ಅವರ ಹೆಸರು ಗಂಗಾಧರ , ವಿನೋದ ಮತ್ತು ಕೆ ವೆಂಕಟೇಶ ಎಂದು ಇರುತ್ತದೆ. ಮಹಿಳಾ ಆರೋಪಿತರ ಹೆಸರು ಪೈಕಿ ಅನೀತಾ ಒಬ್ಬರ ಹೆಸರು ನನಗೆ ನೆನಪಿರುತ್ತದೆ. ಉಳಿದ ಆರೋಪಿತರ ಹೆಸರು ನನಗೆ ನೆನಪಿಲ್ಲ. ಅಲ್ಲಿ ನಾವು ಆರೋಪಿತರೊಂದಿಗೆ ಮಾತುಕತೆ ಮಾಡಿರುವುದಿಲ್ಲ.

ಆರೋಪಿತರಿಂದ ಜಪ್ತಿಪಡಿಸಿಕೊಂಡಿದ್ದ ಹಣ 94 ಸಾವಿರ ರೂಪಾಯಿ ಹಣವನ್ನು ಪೊಲೀಸರು ಚಾಸಾ-1 ರವರಿಗೆ ಮರಳಿ ನೀಡಿರುತ್ತಾರೆ. ಆ ಬಗ್ಗೆ ನಾನು ಪೊಲೀಸರಿಗೆ ಹೇಳಿಕೆ ಮತ್ತು ಮರುಹೇಳಿಕೆ ನೀಡಿರುತ್ತೇನೆ. ಆ ದಿನ ನಾವು ಪ್ರಯಾಣಿಸಿದ ಜೀಪಿನ್ನು ನೋಡಿದರೆ ಗುರುತಿಸುತ್ತೇನೆ. ಒಂದು ಪೋಟೋ ನೋಡಿ ಅದರಲ್ಲಿರುವ ಜೀಪ್‌ನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ 2 ಎಂದು ಗುರುತಿಸಲಾಯಿತು.

<u>ಮರುವಿಚಾರಣೆ ಇಲ್ಲ.</u>

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಶಹಾಪೂರ.

**ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ. ದ. ನ್ಯಾ.ದಂ.ನ್ಯಾಯಾಲಯ,**

**ಶಹಾಪೂರ.**

ಸಿ.ಡಬ್ಲ್ಯೂ. 9 ಪಿ.ಡಬ್ಲ್ಯೂ. 3

ಸಿ.ಸಿ. ನಂ. 281/2016

| | | |
|---|---|---|
| ಹೆಸರು | ಃ | ನಾಗಪ್ಪ |
| ತಂದೆ ಹೆಸರು | ಃ | ಯಂಕಪ್ಪ |
| ವಯಸ್ಸು | ಃ | 52 ವರ್ಷ |
| ಉದ್ಯೋಗ | ಃ | ಒಕ್ಕಲುತನ |
| ವಾಸ | ಃ | ಎಂ.ಕೋಳೂರು ಗ್ರಾಮ. |

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು ದಿನಾಂಕಃ 24-06-2023.
ಮುಖ್ಯ ವಿಚಾರಣೆ ಃ ದಂಡ ಪ್ರಕ್ರಿಯೇ ಸಂಹಿತೆ ಕಲಂ 299 ರ ಅಡಿಯಲ್ಲಿ ಸಹಾಯಕ ಸರಕಾರಿ ಅಭಿಯೋಜಕರವರಿಂದ ಃ

ಚಾಸಾ-10 ರವರ ಪರಿಚಯ ಇರುತ್ತದೆ. ಸಾಕ್ಷಿಗೆ ಒಂದು ಪಂಚನಾಮೆಯ ದೃಡೀಕೃತ ಪ್ರತಿ ತೋರಿಸಿದ್ದಾಗ ಅದರ ಮೇಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 3 ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ 3(ಎ) ಎಂದು ಗುರುತಿಸಲಾಯಿತು.

2. ನಿಪಿ 3 ಕ್ಕೆ ನಾನು 8 ವರ್ಷಗಳ ಹಿಂದೆ ಪೊಲೀಸಠಾಣೆಯಲ್ಲಿ ಪೊಲೀಸರು ಹೇಳಿದ ಮೇರೆಗೆ ಸಹಿ ಮಾಡಿರುತ್ತೇನೆ. ನಿ.ಪಿ.3 ರಲ್ಲಿ ಬರೆದಿರುವ ವಿಷಯ ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಪೊಲೀಸರು ಯಾವುದೇ ವಸ್ತುಗಳನ್ನು ಜಪ್ತಿಪಡಿಸಿಕೊಂಡಿಲ್ಲ. ಆದರೆ ಅಲ್ಲಿ 6 ಜನ ಆರೋಪಿತರನ್ನು ಕೂಡಿಸಿದ್ದರು. ಅವರು ಬಂಗಾರ ಬೆಳ್ಳಿ ಕಳ್ಳತನ ಮಾಡಿದ ವಿಷಯಕ್ಕೆ ಸಂಬಂಧಿಸಿದಂತೆ ಕೂಡಿಸಿದ್ದರು. ನನಗೆ ಈ ಕೇಸಿನ ಬಗ್ಗೆ ಏನೂ ಗೊತ್ತಿಲ್ಲ. ಈ ಕೇಸಿನಲ್ಲಿ ಜಪ್ತಿಪಡಿಸಿಕೊಂಡಿರುವ ವಸ್ತುಗಳನ್ನು ನಾನು ನೋಡಿಲ್ಲ.

3. ಸಾಕ್ಷಿಗೆ ಇನ್ನೊಂದು ಪಂಚನಾಮೆಯ ದೃಡೀಕೃತ ಪ್ರತಿ ತೋರಿಸಿದ್ದಾಗ ಅದರ ಮೇಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 4 ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ 4(ಎ) ಎಂದು ಗುರುತಿಸಲಾಯಿತು. ( ನಿಪಿ 4 ರ ಮೂಲ ಪ್ರತಿ ಸಿಸಿ ನಂಬರ 446/2016 ರಲ್ಲಿ ಇರುತ್ತದೆ)

4. ನಿಪಿ 4 ಕ್ಕೆ ನಾನು 8 ವರ್ಷಗಳ ಹಿಂದೆ ಪೊಲೀಸಠಾಣೆಯಲ್ಲಿ ಪೊಲೀಸರು ಹೇಳಿದ ಮೇರೆಗೆ ಸಹಿ ಮಾಡಿರುತ್ತೇನೆ. ನಿ.ಪಿ.4 ರಲ್ಲಿ ಬರೆದಿರುವ ವಿಷಯ ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಪೊಲೀಸರು ಯಾವುದೇ ವಸ್ತುಗಳನ್ನು ಜಪ್ತಿಪಡಿಸಿಕೊಂಡಿಲ್ಲ. ಈ ಕೇಸಿನಲ್ಲಿ ಜಪ್ತಿಪಡಿಸಿಕೊಂಡಿರುವ ವಸ್ತುಗಳನ್ನು ನಾನು ನೋಡಿಲ್ಲ.

5. ಸಾಕ್ಷಿಗೆ ಮತ್ತೊಂದು ಪಂಚನಾಮೆಯ ದೃಡೀಕೃತ ಪ್ರತಿ ತೋರಿಸಿದ್ದಾಗ ಅದರ ಮೇಲಿರುವ ತನ್ನ

ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 5 ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ 5(ಎ) ಎಂದು ಗುರುತಿಸಲಾಯಿತು. ( ನಿಪಿ 5 ರ ಮೂಲ ಪ್ರತಿ ಸಿಸಿ ನಂಬರ 446/2016 ರಲ್ಲಿ ಇರುತ್ತದೆ)

6. ನಿಪಿ 5 ಕ್ಕೆ ನಾನು 8 ವರ್ಷಗಳ ಹಿಂದೆ ಪೊಲೀಸಠಾಣೆಯಲ್ಲಿ ಪೊಲೀಸರು ಹೇಳಿದ ಮೇರೆಗೆ ಸಹಿ ಮಾಡಿರುತ್ತೇನೆ. ನಿ.ಪಿ.5 ರಲ್ಲಿ ಬರೆದಿರುವ ವಿಷಯ ನನಗೆ ಗೊತ್ತಿಲ್ಲ. ನಾನು ನಿಪಿ 5 ಪಂಚನಾಮೆಗೆ ಠಾಣೆಯಲ್ಲಿ ಮಾತ್ರ ಸಹಿ ಹಾಕಿದ್ದು ಮತ್ತು ಪೊಲೀಸರು ನನ್ನನ್ನು ಬೇರೆ ಯಾವುದೇ ಸ್ಥಳಕ್ಕೆ ಕರೆದುಕೊಂಡು ಹೋಗಿರುವುದಿಲ್ಲ.

(ಈ ಹಂತದಲ್ಲಿ ಸ.ಸ.ಅ. ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದರು. ಅನುಮತಿ ಕೊಟ್ಟಿದೆ)

ಪಾಟೀ ಸವಾಲುಃ ಸ.ಸ.ಅ. ರವರಿಂದಃ

7. ದಿನಾಂಕಃ 21-11-2015 ರಂದು ನನ್ನ ಮತ್ತು ಚಾಸಾ-10 ರವರ ಸಮಕ್ಷಮದಲ್ಲಿ ಆರೋಪಿತರು ಕೃತ್ಯ ಮಾಡಲು ಬಳಸಿದ ಎರಡು ಮೋಟರ ಸೈಕಲ್ ಗಳನ್ನು ಜಪ್ತಿಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಅವುಗಳನ್ನು ಮದ್ಯಾಹ್ನ 3 ಗಂಟೆಯಿಂದ 3-30 ಗಂಟೆಯ ವರೆಗೆ ಆರೋಪಿತರ ಮನೆಯಲ್ಲಿ ಅಂದರೆ ವೀರಘೊಟ ನಿರಾಶ್ರಿತರ ಕಾಲೋನಿಯ ಆರೋಪಿತರ ಬಾಡಿಗೆ ಮನೆಯಲ್ಲಿ ಜಪ್ತಿಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಪಂಚನಾಮೆಗೆ ನಾನು ಮತ್ತು ಚಾಸಾ-10 ರವರು ಸ್ಥಳದಲ್ಲಿಯೋ ಸಹಿ ಹಾಕಿರುತ್ತೇವೆ ಎಂದರೆ ಸರಿಯಲ್ಲ. ಪಂಚನಾಮೆಯನ್ನು ಓದಿ ಹೇಳಿದ ನಂತರ ಅದಕ್ಕೆ ಸಹಿ ಹಾಕಿರುತ್ತೇನೆ ಎಂದರೆ ಸರಿಯಲ್ಲ. ಆ ಮೋಟರ ಸೈಕಲ್ ಗಳನ್ನು ಈಗ ನೋಡಿದರೆ ಗುರುತಿಸಲು ಆಗುವುದಿಲ್ಲ.

8. ದಿನಾಂಕಃ 21-11-2015 ರಂದು ನನ್ನ ಮತ್ತು ಚಾಸಾ-10 ರವರ ಸಮಕ್ಷಮದಲ್ಲಿ ಆರೋಪಿತರು ಕಳ್ಳತನ ಮಾಡಿದ ವಸ್ತುಗಳನ್ನು ಅವರ ಮನೆಯಿಂದ ಅಂದರೆ ವೀರಘೊಟ ನಿರಾಶ್ರಿತರ ಕಾಲೋನಿಯ ಆರೋಪಿತರ ಬಾಡಿಗೆ ಮನೆಯಲ್ಲಿ ಜಪ್ತಿಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಪಂಚನಾಮೆಗೆ ನಾನು ಮತ್ತು ಚಾಸಾ-10 ರವರು ಸ್ಥಳದಲ್ಲಿಯೋ ಸಹಿ ಹಾಕಿರುತ್ತೇವೆ ಎಂದರೆ ಸರಿಯಲ್ಲ. ಪಂಚನಾಮೆಯನ್ನು ಓದಿ ಹೇಳಿದ ನಂತರ ಅದಕ್ಕೆ ಸಹಿ ಹಾಕಿರುತ್ತೇನೆ ಎಂದರೆ ಸರಿಯಲ್ಲ. ಆ ವಸ್ತುಗಳನ್ನು ಈಗ ನೋಡಿದರೆ ಗುರುತಿಸಲು ಆಗುವುದಿಲ್ಲ. ಸದರಿ ಪಂಚನಾಮೆಯನ್ನು ಮದ್ಯಾಹ್ನ 3-40 ರಿಂದ 5 ಗಂಟೆಯ ವರೆಗೆ ಸ್ಥಳದಲ್ಲಿಯೇ ಮಾಡಿ ಮುಗಿಸಿರುತ್ತಾರೆ ಎಂದರೆ ಸರಿಯಲ್ಲ. ಅಲ್ಲಿ ಪೊಲೀಸರು ಒಟ್ಟು 18 ಮೊಬೈಲ್ ಪೋನ್‌ಗಳನ್ನು, ನಗದು ಹಣ್ಣ ಮತ್ತು ಆಟಿಕೆಯ ಫೆಕ್ ನೋಟ್‌ಗಳು ಒಂದು ಕ್ಯಾಶ್ ಬ್ಯಾಗ್ ಮತ್ತು ಒಂದು ಅಂಗಿ ಮತ್ತು ಒಂದು ಬಂಗಾರದ ಮಾಂಗಲ್ಯ ಸರ ಜಪ್ತಿಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

9. ದಿನಾಂಕಃ 21-11-2015 ರಂದು ನನ್ನ ಮತ್ತು ಚಾಸಾ-10 ರವರ ಸಮಕ್ಷಮದಲ್ಲಿ ಆರೋಪಿತರು

ಕಳ್ಳತನ ಮಾಡಿದ ಸ್ಥಳಕ್ಕೆ ಕರೆದುಕೊಂಡು ಹೋಗಿ ನಮ್ಮ ಸಮಕ್ಷಮದಲ್ಲಿ ಗುನ್ಹಾ ಸ್ಥಳದ ಪಂಚನಾಮೆ ಆರೋಪಿತರು ತೋರಿಸಿದಂತೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಪಂಚನಾಮೆಗೆ ನಾನು ಮತ್ತು ಚಾಸಾ-10 ರವರು ಸ್ಥಳದಲ್ಲಿಯೋ ಸಹಿ ಹಾಕಿರುತ್ತೇವೆ ಎಂದರೆ ಸರಿಯಲ್ಲ. ಪಂಚನಾಮೆಯನ್ನು ಓದಿ ಹೇಳಿದ ನಂತರ ಅದಕ್ಕೆ ಸಹಿ ಹಾಕಿರುತ್ತೇನೆ ಎಂದರೆ ಸರಿಯಲ್ಲ. ಈಗ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಪೊಲೀಸರು ಜಪ್ತಿಪಡಿಸಿಕೊಂಡಿರುವ ವಸ್ತುಗಳನ್ನು ನೋಡಿದರೆ ಗುರುತಿಸಲು ಆಗುವುದಿಲ್ಲ.

**<u>ಮರುವಿಚಾರಣೆ ಇಲ್ಲ.</u>**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಶಹಾಪೂರ.